

ಯೂರೋಪಿಯನ್ ರೋಲರ್



ಬ್ಲಾಕ್ ರೆಡ್ ಸ್ಟಾರ್ಟ್

ಮರಿಮಾಡುವ ಸಮಯದಲ್ಲಂತೂ ಅವುಗಳ ಆಕ್ರಮಣಕಾರಿ ಸ್ವಭಾವಕ್ಕೆ ಅಂಜಲೇಬೇಕು. ಹೋದ ವರ್ಷ ನಮ್ಮ ಆಫೀಸಿಗೆ ಹೋಗುವ ಹಾದಿಯಲ್ಲಿದ್ದ ಹೂಕುಂಡವೊಂದರಲ್ಲಿ ಮ್ಯೂ ಗಲ್ ಮೊಟ್ಟೆ ಇಟ್ಟಿತ್ತು. ನಾವು ಅತ್ತ ಕಡೆ ಹೋದರೆ ಸಾಕು, ನಮ್ಮನ್ನೇ ಕುಕ್ಕಲು ಬಂದು ಹೆದರಿಸುತ್ತಿತ್ತು. ಅದರ ಮರಿಗಳು ಬೆಳೆದು ಹಾರಿ ಹೋಗುವವರೆಗೂ ನಾವು ಬೇರೆ ದಾರಿ ಹಿಡಿಯಬೇಕಾಯಿತು.

ಮುಂದೆ ನೀರಿನ ಹಕ್ಕಿಗಳನ್ನು ನೋಡೋಣವೆಂದು ಕೆರೆಯೊಂದರ ಬಳಿ ಹೋದೆವು. ಕೆರೆಯ ಒಂದು ಬದಿಯಲ್ಲಿ ಎತ್ತರವಾದ ನೆಲವಿತ್ತು. ಉಳಿದ ಕಡೆಯೆಲ್ಲಾ ಕುರುಚಲು ಪೊದೆಗಳು, ಸಣ್ಣ ಮರಗಳು ತುಂಬಿದ್ದವು. ಆ ಮಣ್ಣಹಾಸಿನ ತುಂಬಾ ಚಿಕ್ಕ ಚಿಕ್ಕ ರಂಧ್ರಗಳು. ಆಗಾಗ ನೀಲಿ, ಕಂದು, ಹಳದಿ, ಹಸಿರು ಬಣ್ಣಗಳನ್ನೆಲ್ಲ ತನ್ನ ಮೈಗೆ ಅಂಟಿಸಿಕೊಂಡಿದ್ದ ಹಕ್ಕಿಗಳು ಆ ತೂತುಗಳೊಳಗೆ ಹೋಗಿ ಬರುತ್ತಿದ್ದವು. ಅವು ಯೂರೋಪಿಯನ್ ಬೀಈಟರ್‌ಗಳು. ನಾನು ಯೂರೋಪಿಯನ್ ಬೀ–ಈಟರ್‌ಗಳನ್ನು ನೋಡಿದ್ದು ಅದೇ ಮೊದಲಾಗಿತ್ತು. ಅಲ್ಲೇ ಬೋಳು ಗಿಡಗಳ, ವಿದ್ಯುತ್ ತಂತಿಗಳ ಮೇಲೆ ಕುಳಿತು ಸಣ್ಣ ಪುಟ್ಟ ಹುಳ, ನೊಣ ಮುಂತಾದುವುಗಳನ್ನು ಗಬಕ್ಕನೇ ಹಿಡಿದು, ಪಟ್ ಪಟ್ ಎಂದು ತಂತಿಗಳಿಗೋ, ಮರದ ಕೊಂಬೆಗಳಿಗೋ ಹೊಡೆದು ಕೊಂದು ತಿನ್ನುತ್ತಿದ್ದವು. ನಮ್ಮ ಮಲೆನಾಡಿನ ಕಡೆ ಜೇನುಹಿಡುಕ ಹಕ್ಕಿಗಳೆಂದೇ ಹೆಸರಾದ ಗ್ರೀನ್ ಬೀ ಈಟರ್ (ಹಸಿರು ಕಳ್ಳಿಪೀರ) ಗಳ ಹತ್ತಿರದ ಸಂಬಂಧಿಗಳು. ಮರಳು ಮಣ್ಣಿನ ದಂಡೆಗಳಲ್ಲಿ ಕೊಳವೆಯಂತಹ ಉದ್ದದ ತೂತು ಕೊರೆದು, ಅದರಲ್ಲಿ ಒಂದು ಬಾರಿಗೆ 5–8 ಮೊಟ್ಟೆಗಳನ್ನಿಡುತ್ತವೆ. ಗಂಡು ಹಾಗೂ ಹೆಣ್ಣು ಹಕ್ಕಿಗಳೆರಡೂ ಮರಿಗಳನ್ನು ಬೆಳೆಸುವ ಜವಾಬ್ದಾರಿಯನ್ನು ಸಮನಾಗಿ ಹಂಚಿಕೊಳ್ಳುತ್ತವೆ. ಇನ್ನು ನೀರಿನಲ್ಲಿ ಲಿಟಲ್ ಗ್ರೇಬ್, ಗ್ರೇಟ್ ಕ್ರೆಸ್ಟೆಡ್ ಗ್ರೇಬ್‌ಗಳಂತಹ ಗುಳುಮುಳುಕಗಳ ಸಾಲಿಗೆ ಸೇರಿದ ಹಕ್ಕಿಗಳು, ಕಾಮನ್ ಟರ್ನ್, ಬ್ಲಾಕ್ ವಿಂಗ್ಡ್ ಸ್ಟಿಲ್ಟ್ ಮಾತ್ರವಲ್ಲದೆ, ನಾವೆಂದೂ ನೋಡಿರದಿದ್ದ ಗಾಢ ಕಂದು ಬಣ್ಣದ ಫೆರುಗಿನಸ್ ಬಾತುಗಳಿದ್ದವು.

ಊಟದ ಸಮಯವಾಗಿತ್ತು. ದಾರಿಯಲ್ಲಿ ಸೂರ್ಯಕಾಂತಿಗಳಿಂದ ನಳನಳಿಸುತ್ತಿದ್ದ ಹೊಲವೊಂದರ ಪಕ್ಕದಲ್ಲಿ ಕುಳಿತು ಊಟ ಮುಗಿಸಿದೆವು. ಹತ್ತಿರದ ಹಳ್ಳಿಯೊಂದಕ್ಕೆ ತೆರಳಿ ಅಲ್ಲಿನ ಅಂಗಡಿಯಲ್ಲಿ ಕಾಫಿ ತೆಗೆದುಕೊಂಡು ಅಡ್ಡಾಡಿದೆವು. ಡೇವಿಡ್ ನಮ್ಮನ್ನು ಒಂದಷ್ಟು ಎತ್ತರದ ಮರಗಳಿದ್ದೆಡೆಗೆ ಕರೆದೊಯ್ದ. ಬೋಳಾದ ಆ ಮರಗಳ ಮೇಲೆಲ್ಲಾ ರೂಕ್ ಎಂದು ಕರೆಯಲಾಗುವ ದೊಡ್ಡ ಗಾತ್ರದ ಕಾಗೆಗಳ ಗೂಡುಗಳಿದ್ದವು. ಆದರೆ ನಾವು ನೋಡಲು ಬಂದಿದ್ದು ಕಾಗೆಗಳನ್ನಲ್ಲ. ಬದಲಿಗೆ ಆಫ್ರಿಕಾದಲ್ಲಿ ಚಳಿಗಾಲ ಕಳೆದು ಬೇಸಿಗೆಯ ಪ್ರಾರಂಭದಲ್ಲಿ ಯೂರೋಪ್‌ಗೆ ಆಗಮಿಸುವ ರೆಡ್‌ಫೂಟೆಡ್ ಫಾಲ್ಕನ್‌ಗಳನ್ನು. ಅವುಗಳಲ್ಲಿ ಗಂಡು ಹಕ್ಕಿಗಳಿಗೆ ಬೂದು ನೇರಳೆ ಬಣ್ಣ, ಕೆಂಪು ಕೊಕ್ಕು, ಕೆಂಪು ಕಾಲಿದ್ದರೆ, ಹೆಣ್ಣು ಹಕ್ಕಿಗಳಿಗೆ ಮಾತ್ರ ಕಂದು ಬಣ್ಣ, ಬೂದು ರೆಕ್ಕೆಯಿರುತ್ತದೆ. ರೆಡ್ ಫೂಟೆಡ್ ಫಾಲ್ಕನ್‌ಗಳು ತಮ್ಮದೇ ಆದ ಗೂಡು ಕಟ್ಟಿಕೊಳ್ಳದೆ, ಕಾಗೆಗಳು ಬಳಸಿ ಬಿಟ್ಟ ಗೂಡುಗಳನ್ನು ಉಪಯೋಗಿಸಿಕೊಂಡು ಸಂತಾನಾಭಿವೃದ್ಧಿ ಮಾಡುತ್ತವೆ.

ಸಂಜೆಯಾಗುತ್ತಿತ್ತು. ಇನ್ನೇನು ಹಿಂದಿರುಗುವ ಸಮಯ ಸಮೀಪಿಸುತ್ತಿತ್ತು. ಆದರೆ ನಮಗಿನ್ನೂ ಹಂಗೇರಿಯ ಬಯಲುಗಳಲ್ಲಿ ಕಾಣಸಿಗುವ ಗ್ರೇಟ್ ಬಸ್ಟರ್ಡ್ ಎಂಬ ಹಕ್ಕಿ ಕಣ್ಣಿಗೆ ಬಿದ್ದಿರಲಿಲ್ಲ. ಅದನ್ನು ನೋಡದೆ ಮರಳುವ ಇಚ್ಛೆ ನಮಗಿರಲಿಲ್ಲ. ಅದನ್ನು ಹುಡುಕುತ್ತ ಬಹಳಷ್ಟು ಅಲೆದೆವು. ಒಂದೆಡೆ ಡೇವಿಡ್ ಕಾರು ನಿಲ್ಲಿಸಿ, ತನ್ನ ಟೆಲಿಸ್ಕೋಪ್ ಕೆಳಗಿಳಿಸಿ ನಮ್ಮನ್ನು ಕರೆದ. ದೂರದಲ್ಲಿ, ಬರಿಕಣ್ಣಿಗಷ್ಟೇ ಅಲ್ಲ – ಬೈನಾಕುಲರ್‌ನ ಕಣ್ಣಿಗೂ ನಿಲುಕದಷ್ಟು ದೂರದಲ್ಲಿ ಎರಡು ಕಂದು ಬಣ್ಣದ ಹಕ್ಕಿಗಳು ಕಂಡವು. ಅವೇ ಗ್ರೇಟ್ ಬಸ್ಟರ್ಡ್ ಹಕ್ಕಿಗಳು. ಅದೃಷ್ಟವಶಾತ್ ಅಷ್ಟು ದೂರದಲ್ಲಿದ್ದ ಹಕ್ಕಿಗಳು ನಮ್ಮತ್ತಲೇ ತೀರಾ ಸಮೀಪದವರೆಗೂ ಬಂದು ಹಾರಿಹೋದವು. ಭಾರತದಲ್ಲಿ ಬೆರಳೆಣಿಕೆಯಷ್ಟು ಉಳಿದಿರುವ, ವಿನಾಶದ ಅಂಚಿನಲ್ಲಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್ ಹಕ್ಕಿ ಇವುಗಳ ಸಂಬಂಧಿ.

ಅಲ್ಲಿಂದ ವಾಪಾಸಾಗುವಾಗ ಕೊನೆಯ ಬಾರಿ ಒತ್ತೊತ್ತಾಗಿ ಮರಗಳಿದ್ದ ಜಾಗದಲ್ಲಿ ಕಾಡಿನ ಹಕ್ಕಿಗಳಿಗಾಗಿ ಹುಡುಕಿದೆವು. ಅಲ್ಲಿ ನೊಣ ಹಿಡುಕ ಹಕ್ಕಿಗಳು, ಗ್ರೇಟ್ ಸ್ಪಾಟೆಡ್ ವುಡ್ ಪೆಕರ್, ಸಿರಿಯನ್ ವುಡ್ ಪೆಕರ್ ಮುಂತಾದವು ನಮ್ಮ ಪಟ್ಟಿಗೆ ಸೇರಿಕೊಂಡವು. ಒಟ್ಟಾರೆ ನಾವು ಅಂದು ಕಂಡ ಪಕ್ಷಿಗಳ ಸಂಖ್ಯೆ 90 ದಾಟಿತ್ತು. ಕಿಸ್ಕುನ್ ಶಾಗ್ ಪಕ್ಷಿಕಾಶಿಯಲ್ಲಿ ಕಳೆದ ಅವಿಸ್ಮರಣೀಯ ದಿನವೊಂದು ನಮ್ಮ ನೆನಪಿನಂಗಳವನ್ನು ಸೇರಿತು.

ಪ್ರತಿಕ್ರಿಯಿಸಿ: ಟೀಕೆ–ಟಿಪ್ಪಣಿಗಳಿಗೆ ಸ್ವಾಗತ.
ಇ–ಮೇಲ್:feedback@sudha.co.in

